ISSN: 2347-2723 IMPACT FACTOR : 3.3754(UIF) VOLUME - 5 | ISSUE - 1 | AUGUST - 2017

REVIEW OF LITERATURE

# “ಮುಗುಳನಾಗಾಂವಿಯ ಕಟ್ಟಿಮನಿ ಹಿರೇಮಠ ಸಂಸ್ಥಾನದ ಒಂದು ಅವಲೋಕನ”



ಶಿವಶರಣಪ್ಪ ಪಿ.ಎಚ್. ಕೋಡ್ಲಿ
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ

ಈ ಜಂಬೂದ್ವೀಪದ ಭರತಖಂಡದೋಳ್ ಕರ್ನಾಟಕವೆಂಬ ರಾಜ್ಯ, ಇಲ್ಲಿ ಗುಲಬರ್ಗಾವೆಂಬ ಪ್ರತಿಷ್ಠಿತ ಪೊಳಿಲ್, ಚಿತ್ತಾಪೂರ ತಾಲೂಕಿನ ಮುಗಳನಾಗಾಂವಿಯೆಂಬ ಪಳ್ಳಿ. ಈ ಪಳ್ಳಿ (ಗ್ರಾಮ) ಸಾಮಾನ್ಯವಾದ ಪಳ್ಳಿಯಲ್ಲ, ಭರತಖಂಡದ ಉಜ್ವಲ ಸಂಸ್ಕೃತಿಯನ್ನು ಜಗತ್ತಿಗೆ ಸಾರಿದ ಸಿದ್ಧಪುರುಷರು, ಮಹಾಮಹಿಮಾತೀತರು, ಬ್ರಹ್ಮಚಾರ್ಯವೆಂಬ ಕಠಿಣ ಸಾಗರವನ್ನೇ ಧಾಟಿ, ಕೋಟಿ–ಕೋಟಿ ಜನರಿಗೆ ಸುಮಾರ್ಗವನ್ನು ಬೋಧಿಸಿದ ಸೀಮಾಪುರುಷರು ಅವತರಿಸಿದ ಪುಣ್ಯದಾ ನೆಲೆವಿಡು.

ಈ ಗ್ರಾಮ ಚಿತ್ತಾಪೂರದಿಂದ ವಾಯುವ್ಯಕ್ಕೆ 30 ಕಿ.ಮೀ. ದೂರದಲ್ಲಿರುವ ಈ ಗ್ರಾಮಕ್ಕೆ ಸುವರ್ಣ ಇತಿಹಾಸವಿದೆ. ಒಂದೆ ವಾಕ್ಯದಲ್ಲಿ ಹೇಳಬೇಕಾದರೆ, ಇಲ್ಲಿ ಹಿಂದು–ಮುಸ್ಲಿಂರೆಂಬ ಭೇದವಿಲ್ಲ, ಜಾತಿ–ಜನಾಂಗಗಳ ಮದ್ಯ ವೈಷಮ್ಯವಿಲ್ಲ. ಉದಾಹರಣೆಗೆ: ನಾನು ಸಂಶೋಧನೆಯ ಸಂದರ್ಭದಲ್ಲಿ ಭೇಟಿಕೊಟ್ಟಾಗ, ಸ್ವಾಮಿಗಳು, ಗೌಡರು, ಮುಸ್ಲಿಂರು, ಹಳೆಯ ತಲೆಮಾರಿನ ವ್ಯಕ್ತಿಗಳು, ನನಗೆ ಕೊಟ್ಟ ಗೌರವ ಮರೆಯುವಂತಿಲ್ಲ. ತಮ್ಮ ಗ್ರಾಮದ ಗತ ಇತಿಹಾಸವನ್ನು ನನ್ನ ಎದುರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅವರ ಹೇಳಿಕೆಯ ತುಣುಕುಗಳು ಮತ್ತು ಶಾಸನ ಹಾಗೂ ಸಾಹಿತ್ಯಿಕ ಆಧಾರಗಳಿಂದ ಈ ಲೇಖನ ಸಿದ್ಧವಾಗಿದೆ.

ಮುಗಳನಾಗಾಂವಿಯ ಗ್ರಾಮದ ಹೆಸರು ಹೇಗೆ ಬಂತು ಈ ನಾಮ ಬರಲು ಕಾರಣಗಳೇನು? ಎನ್ನುವ ವಿಷಯ ಶೋಧಿಸಿದಾಗ ಲಭ್ಯವಿರುವ ಮಾಹಿತಿಯ ಪ್ರಕಾರ, ಪ್ರಾಚೀನ ಶಾಸನಗಳ ಆಧಾರದ ಪ್ರಕಾರ ಈ ಗ್ರಾಮದ ಹೆಸರು ‘ಮುಗಳ ನಗೆ’ ‘ಅಮರ ಗ್ರಾಮ’ ಎಂದೇ ಉಲ್ಲೇಖಿತಗೊಂಡಿದೆ. ಈ ಮಾತಿಗೆ ಆಧಾರವೆಂದರೆ ಇದೇ ಗ್ರಾಮದಲ್ಲಿ ದೊರೆತ ಒಂದು ವಿಘ್ನವಾದ ಶಾಸನದಿಂದ ತಿಳಿದು ಬರುತ್ತದೆ. ಈ ಗ್ರಾಮದಲ್ಲಿ ಕಲ್ಯಾಣದ ಚಾಲುಕ್ಯರ ಆಳ್ವಿಕೆಯಲ್ಲಿ ಕಟ್ಟಲ್ಪಟ್ಟ ಒಂದು ಸುಂದರವಾದ ಭೋಗಲಿಂಗೇಶ್ವರ ದೇವಾಲಯ ಇದಕ್ಕೆ ಸಾಕ್ಷಿಯಾಗಿದೆ. ದೇಗುಲವೆಂದು ಕರೆಯಲ್ಪಡುವ ತಗ್ಗಿನ ಮಂಟಪವಿದೆ. ಭೋಗಲಿಂಗೇಶ್ವರ ದೇವಾಲಯ ಶಿಥಿಲಗೊಂಡು ಜೀರ್ಣಾವಸ್ಥೆಯಲ್ಲಿದೆ. ಹನುಮಂತನ ಗುಡಿಯ ಆವರಣದಲ್ಲಿ ಗಣಪತಿ ಸಪ್ತ ಮಾತೃಕಾ, ಮೈಲಾರ, ಕೇಶವ ಮುಂತಾದ ಶಿಲ್ಪಗಳಿವೆ. ಒಂದು ವೀರಗಲ್ಲು ಮೂರ್ತಿ ಇದೆ. ಕುಂಬಾರ, ಸಾಲಿಗುಡಿಯ ಬಳಿ ಎರಡು ಮಾಸ್ತಿ ಕಲ್ಲುಗಳಿವೆ. ಇವುಗಳ ಇತಿಹಾಸ ತಿಳಿದು ಬರುವುದಿಲ್ಲ.

ಮುಗಳನಾಗಾಂವಿ ಎಂದು ಈ ಗ್ರಾಮಕ್ಕೆ ಹೆಸರು ಬರಲು ಇನ್ನೊಂದು ಬಲವಾದ ಕಾರಣವಿದೆ. ದುರುದಡ, ಗೊಗೆಕೊಳ್ಳ, ನಾಗಾವಿ, ಈ ಮೂರು ಗ್ರಾಮಗಳ ಸಂಗಮವನ್ನು ‘ಮುಗಳನಾಗಾಂವಿ’ ಎಂದು ಕರೆದಿದ್ದಾರೆ ಎಂದು ಸ್ಥಳ ಪುರಾಣ ಹೇಳುತ್ತದೆ. ಈ ಗ್ರಾಮದ ಹೊರವಲಯದಲ್ಲಿ ಸುಂದರವಾಗಿ ಕಂಗೊಳಿಸುವ ಕಟ್ಟಿಮನಿ ಹಿರೇಮಠವು ಧಾರ್ಮಿಕ ಚಟುವಟಿಕೆ ಅನ್ನದಾಸೋಹಕ್ಕೆ ವಿಶ್ವಕ್ಕೆ ಮಾದರಿಯಾಗಿದೆ.

ಶ್ರೀಮಠವು 14ನೇ ಶತಮಾನದ ಪೂರ್ವದಲ್ಲಿಯೇ ಸ್ಥಾಪಿತವಾಗಿ, ಧಾರ್ಮಿಕ ಚಟುವಟಿಕೆಗೆ ಮತ್ತು ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತವಾಗಿತ್ತು. ಕ್ರಿ.ಶ. 1396ಕ್ಕೂ ಮೊದಲು ಈ ಹಿರೇಮಠವು ಸ್ಥಾಪನೆಯಾಗಿತ್ತು. ಅಂದಿನ ಆದಿಗುರು ಮಹಾಂತ ಶಿವಯೋಗಿಗಳ ದಿವ್ಯ ಸಾನಿಧ್ಯದಲ್ಲಿ ಸ್ಥಾಪನೆಗೊಂಡು ವೀರಶೈವ ಧರ್ಮ ಸಿದ್ಧಾಂತವನ್ನು ಅವರು ಎತ್ತಿ ಹಿಡಿದರು. ಹಿಂದು ಧರ್ಮದಲ್ಲಿ ಬರುವ ಎಲ್ಲಾ ಧರ್ಮ ಪಂಗಡದವರನ್ನು ಸಮಾನವಾಗಿ ಕಂಡರು. ಹೀಗಾಗಿ ಇವರ ಕೀರ್ತಿ ದಶದಿಕ್ಕುಗಳಲ್ಲಿ ಹರಡಿಕೊಂಡಿತು. ಅರ್ಚನ–ಅರ್ಪಣ ಅನುಭವ ಸಾಧನೆಯ ವ್ಯಕ್ತಿತ್ವವನ್ನು ಸಿದ್ಧಿಸಿಕೊಂಡಿದರು. ಶ್ರೀಮಠದ ಮೂಲಕ ಶಿವ ಸಮಾಜವನ್ನು ಕಟ್ಟುವಲ್ಲಿ ನಿರತರಾದರು. ಭಕ್ತರೆಲ್ಲರು ಒಂದೇ ಯಾವ ಜಾತಿ ಭೇದವಿಲ್ಲ, ಎಲ್ಲ ಧರ್ಮದವರನ್ನು ಸಮಾನರೆಂದೆ ಸಾರಿದರು. ಬಸವಣ್ಣನ ತತ್ವಗಳ್ನು ಮೈಗೂಡಿಸಿಕೊಂಡ ಇವರು ಎಲ್ಲಾ ಧರ್ಮದವರನ್ನು ತಮ್ಮ ಮಕ್ಕಳೆಂದೆ ಬಗೆದರು. ಇವರು

ತಪೋನಿಷ್ಠರು, ಮಹಾತಪಸ್ವಿಗಳಾಗಿ ದೇಶ ಸಂಚಾರ ಹೊರಟು, ಈ ನಾಡಿನ ನಾನಾ ಭಾಗದಲ್ಲಿ ಧರ್ಮದ ಬಗ್ಗೆ ಭಕ್ತರಲ್ಲಿ ಅರಿವನ್ನು ಮೂಡಿಸಿ, ಎಲ್ಲೆಲ್ಲಿ ನೆಲೆ ನಿಂತರೋ ಅಲ್ಲಲ್ಲಿ ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗಳ ಕೇಂದ್ರಗಳನ್ನಾಗಿ ಮಾಡಿದರು. ಈ ಮುಗಳನಾಗಾಂವಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಈ ಮಠವು ನಿರಂತರವಾಗಿ ನಡೆದುಕೊಂಡು ಬರುವಂತೆ ಭದ್ರಬುನಾದಿಯನ್ನು ಹಾಕಿದರು. ತಮ್ಮ ಜೀವಿತ ಅವಧಿಯಲ್ಲಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳಿಗೆ ನೇಮಿಸಿ ಲಿಂಗೈಕ್ಯರಾದರು. ಶ್ರೀ ಕರಿಬಸವರು ಗುರುಲಿಂಗ ಜಂಗಮ ಪೂಜೆಯ ಬಲದಿಂದ ಪವಾಡ ಪುರುಷರೆನಿಸಿಕೊಂಡು. ಕುಸುನೂರಿನ ಮಹಾಶರಣರಾಗಿ ಬಾಳಿ ಬದುಕಿದ ಸಿದ್ದಪ್ಪಯ್ಯನವರಿಗೆ, ಕರಿಬಸವೇಶ್ವರರು ಕ್ರಿಯಾಮೂರ್ತಿಗಳಾಗಿರುವುದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಇವರ ನಂತರ ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಷ.ಬ್ರ.ಶ್ರೀ. ನಾಗಭೂಷಣ ಶಿವಾಚಾರ್ಯರು ಸ್ವಾಮಿಗಳು, ಷ.ಬ್ರ.ಶ್ರೀ. ಎರಡನೇಯ ಮಳೆಯ ಶಿವಾಚಾರ್ಯ ಸ್ವಾಮಿಗಳು, ಷ.ಬ್ರ.ಶ್ರೀ. ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಷ.ಬ್ರ.ಶ್ರೀ. ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಷ.ಬ್ರ.ಶ್ರೀ. ಮೂರನೇಯ ಮಳೆ ಶಿವಾಚಾರ್ಯ ಸ್ವಾಮಿಗಳು.

ಈ ಮಹಾಮಹಿಮರಲ್ಲಿ ಮುಗಳನಾಗಾಂವಿಯ ಕೀರ್ತಿ ಜಗತ್ತಿನ ಉತ್ತುಂಗ ಶಿಖರಕ್ಕೆ ಏರಿಸಿದದವರಲ್ಲಿ **ಲಿಂ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು** ಜೀವಿಸಿದ್ದ ಕಾಲದಲ್ಲಿ ಈ ಮಠದ ಕೀರ್ತಿ ದಶದಿಕ್ಕುಗಳಲ್ಲಿ ಹರಡಿತ್ತು. ಗುಲಬರ್ಗಾ ಏಳನೇಯ ಪೀಠಾಧಿಪತಿಗಳಾದ ದೊಡ್ಡಪ್ಪ ಅಪ್ಪನವರ ಕ್ರಿಯಾಮೂರ್ತಿಗಳಾಗಿದ್ದು ತಮ್ಮ ಘನಾತೀಶಯುವನ್ನು ಮೆರೆದರು. ಭೂತ ಓಡಿಸುವಲ್ಲಿ, ಭಾನಾಮತಿಗಳನ್ನು ನಿಲ್ಲಿಸುವಲ್ಲಿ, ಎತ್ತಿದ ಕೈ ಎಂದು ಇಲ್ಲಿನ ಜನ ಇಂದಿಗೂ ಕೊಂಡಾಡುತ್ತಾರೆ. ಎಷ್ಟೋ ದೆವ್ವಗಳನ್ನು ಬಿಡಿಸಿದ ಕಥೆಗಳನ್ನು ಸಾಕ್ಷಿ ಸಮೇತ ಹೇಳುತ್ತಾರೆ. ಮದುವೆಯಾಗಿ ಇಪ್ಪತ್ತು ವರ್ಷಗಳಾದರೂ ಮಕ್ಕಳಾಗದೇ ಇದ್ದವರು ಶ್ರೀ ಮಠಕ್ಕೆ ನಡೆದುಕೊಂಡು ಶ್ರೀ ಸಿದ್ಧಲಿಂಗರ ಆಶೀರ್ವಾದದಿಂದ ಮಕ್ಕಳ ಭಾಗ್ಯ ಪಡೆದ ದಂಪತಿಗಳನ್ನು ನಮ್ಮ ಎದುರು ತಂದು ನಿಲ್ಲಿಸುತ್ತಾರೆ. ಆ ಮಕ್ಕಳು ಪಡೆದ ದಂಪತಿಗಳು ಇಂದು ಇಲ್ಲ ಆದರೆ ಅವರ ಮಕ್ಕಳು ಶ್ರೀಗಳ ಆಶೀರ್ವಾದದಿಂದ ಹುಟ್ಟಿದ ವ್ಯಕ್ತಿಗಳು ತಮ್ಮ ಬಾಳಿನ ಕಥೆಯನ್ನು ಹೇಳುವಾಗ ಕೇಳುಗರಿಗೆ ಎದೆ ಜಲ್ಲ್ ಎಂದೆನಿಸಿ, ಗುರುಗಳನ್ನು ತಮ್ಮ ಮನದಲ್ಲಿ ನೆನೆಯುತ್ತಾರೆ. ತಾವು ಕಥೆಗಳನ್ನು ಹೇಳುವಾಗ ಕಣ್ಣು ತುಂಬಿ ನೀರು ತಂದು ಗುರುಗಳನ್ನು, ತಮ್ಮ ತಂದೆ ಮತ್ತು ತಾಯಿಯರನ್ನು ನೆನೆದು ಹೃದಯ ಉಕ್ಕಿ ಬಂದು ಅಳುತ್ತಲೇ ಹೇಳುವುದುನ್ನು ನಾನೇ ಕಂಡಾರೆ ಕಂಡು ಕಿವಿಯಿಂದ ಕೇಳಿ ಅದನ್ನು ಅನುಭವಿಸಿದ್ದೇನೆ. ಈ ಪವಾಡ ಪುರುಷರು ಕ್ರಿ.ಶ. 1949ರಲ್ಲಿ ಲಿಂಗಾರ್ಚನೆ ಮಾಡುತ್ತಲೆ ಲಿಂಗದಲ್ಲಿ ಬೆರೆತು ಲಿಂಗವಾದರು.

ಇವರ ಪಡಿಯಚ್ಚು ಎಂಬಂತೆ ಇವರ ನಿಟ್ಟನಲ್ಲಿಯೇ ಶ್ರೀ ಮಠದ ಪೂಜ್ಯರ ವಾಣಿಯಂತೆ ಸಕಲ ಸದ್‌ಭಕ್ತರ ಸದೀಚ್ಛೆಯಂತೆ 15ನೇ ಪೀಠಾಧಿಕಾರಿಯಾಗಿ **ಶ್ರೀ. ಮ॥ ಘ॥ ಚ॥ ಅಭಿನವಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು** ಕ್ರಿ.ಶ. 1989ರಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಪಟ್ಟಾಧಿಕಾರ ವಹಿಸಿಕೊಂಡರು. ಭಕ್ತರ ಸುಖವೇ ನನ್ನ ಸುಖ ಭಕ್ತರ ದುಃಖವೇ ನನ್ನ ದುಃಖವೆಂದು ತಿಳಿದು ಸರ್ವಭಕ್ತರ ಮನವನ್ನು ಗೆದ್ದು ವಾಕ್ಯ ಸಿದ್ಧಪುರುಷರೆನಿಸಿಕೊಂಡರು. ಕೋಟ್ಯಾನುಕೋಟಿ ಭಕ್ತರ ಗುರುವಾಗಿದ್ದಾರೆ. ಈ ಮಹಾಮಹಿಮಾತೀತರು, ಗುಲಬರ್ಗಾ ತಾಲೂಕಿನ ಅಂಕಲಗಿ ಗ್ರಾಮದ ಶಿವದಂಪತಿಗಳಾದ ಶ್ರೀ ಶಂಕರಯ್ಯ ಮತ್ತು ಶ್ರೀಮತಿ ಗುರುಬಾಯಿಯವರ ಪುತ್ರರಾಗಿ ಕ್ರಿ.ಶ. 1977ರ ಜನೆವರಿ 25ರಂದು **ಶ್ರೀ ಅಭಿನವಸಿದ್ಧಲಿಂಗ ಶಿವಾಚಾರ್ಯರು** ಜನಿಸಿದರು. ಮತ್ತೆ ಹಿಂದಿನ ಗತವೈಭವವನ್ನು ಮುಂದುವರೆಸಿದ ಕೀರ್ತಿ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯರಿಗೆ ಸಲ್ಲುತ್ತದೆ. ಮಠದ ಕಡೆ ಹೆಚ್ಚು ಗಮನ ಹರಿಸಿ ಭಕ್ತರ ಸೇವೆಯಿಂದ ಮಠದ ಜೀರ್ಣೋದ್ದಾರ ಕೈಗೊಂಡಿದ್ದಾರೆ.

“ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪಿಸಲಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ಸಲ್ಲಿಸಲಾಗುತ್ತದೆ. ಅಮಾವಾಸ್ಯೆ ಮತ್ತು ಹುಣ್ಣಿಮೆ, ಕಾರ್ತಿಕ ಮತ್ತು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತದೆ. ಶ್ರಾವಣದಲ್ಲಿ ಒಂದು ತಿಂಗಳು ಪಾದಪೂಜೆಯನ್ನು ನಡೆಸಲಾಗುತ್ತದೆ. ವೈಶಾಖ ಮಾಸದಲ್ಲಿ ಸಿದ್ಧಲಿಂಗೇಶ್ವರರ ಜಾತ್ರೆಯನ್ನು ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಇಪ್ಪತ್ತೊಂದು ದಿನಗಳ ಕಾಲ ಪುರಾಣ, ಐದು ದಿನ ಸಂಗೀತೋತ್ಸವ ಸಾಹಿತ್ಯ ಕಾರ್ಯಕ್ರಮಗಳು ನಡೆಯುತ್ತವೆ. ಒಟ್ಟು ಐದು ದಿನ ನಡೆಯುವ ಈ ಜಾತ್ರೆಯಲ್ಲಿ ಜಂಗಮ ವಟುಗಳಿಗೆ ಶಿವದೀಕ್ಷೆ, ಅಯ್ಯಾಚಾರವನ್ನು ನಡೆಸಲಾಗುತ್ತದೆ”[1]. ವಾಕ್ಯಸಿದ್ಧಿಪುರುಷರಾದ **ಶ್ರೀ ಅಭಿನವಸಿದ್ಧಲಿಂಗ ಸ್ವಾಮಿಗಳ** ಕೀರ್ತಿ ಹಲವು ರಾಜ್ಯ, ರಾಷ್ಟ್ರಗಳ ತುಂಬಾ ವ್ಯಾಪಿಸಿದೆ. ಆಂಧ್ರ ಪ್ರದೇಶ, ಮಹಾರಾಷ್ಟ್ರದಿಂದ ಭಕ್ತರ ದಂಡು ಜಾತ್ರೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದುನ್ನು ನೋಡಿದರೆ ಇವರ ಕೀರ್ತಿಯ ಬಗ್ಗೆ ಹೆಮ್ಮೆ ಎನಿಸುತ್ತದೆ.

**ಶ್ರೀ ಅಭಿನವಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು** ಮೃದು ಸ್ವಭಾವದವರು, ಮಗುವಿನಂತಹ ಮನಸ್ಸುಳ್ಳವರು, ಬಡವರೆ ಇರಲಿ, ಶ್ರೀಮಂತರಿರಲಿ, ಒಂದೇ ದೃಷ್ಟಿಯಲ್ಲಿ ಕಾಣುವಂತಹವರು. ಭಕ್ತರನ್ನು ತಮ್ಮ ಮಕ್ಕಳಂತೆ ಕಾಣುವರು. ಜ್ಯೋತಿಷ್ಯ ಶಾಸ್ತ್ರ ಮತ್ತು ನಾಟಿವೈದ್ಯಕೀಯ ವಿದ್ಯೆಯನ್ನು ಬಲ್ಲವರು. ಹಲವು ರೋಗಗಳಿಗೆ ತುತ್ತಾಗಿ ಎಲ್ಲಾ ಆಸ್ಪತ್ರೆಗಳನ್ನು ತಿರುಗಿ ಸುಸ್ತಾಗಿ ಕೊನೆಗೆ ಗುರುಗಳ ಮೊರೆ ಹೋಗಿ, ಚಿಕಿತ್ಸೆ ಪಡೆದುಕೊಂಡು ಗುಣಮುಖರಾದವರ ಒಂದು ಸಮೂಹ ಸಿಗುತ್ತದೆ. ಪ್ರತಿ ಅಮಾವಾಸ್ಯೆಯ ಮುನ್ನ ದಿನ ರಾತ್ರಿ ಭಕ್ತರ ಜನಸಾಗರವೇ ಇರುತ್ತದೆ. ಮೇಲು–ಕೀಳು ಎನ್ನದೆ ಜಾತಿ ಭೇದ ಮಾಡದೇ ಸಮಸ್ಯೆಗಳನ್ನು ಕೇಳಿ ಅವುಗಳಿಗೆ ಪರಿಹಾರ ನೀಡುತ್ತಾರೆ.

ಅವರ ಒಂದೊಂದು ಮಾತು ವೇದವಾಕ್ಯದಂತೆ ಮೂಡಿ ಬರುತ್ತವೆ. ಭಕ್ತರು ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಲು ರಾತ್ರಿ ಇಡಿ ಕುಳಿತುಕೊಳ್ಳುವುದನ್ನು ನೋಡಿದರೆ, ಸ್ವಾಮಿಗಳ ಮಹಿಮೆಯ ಬಗ್ಗೆ ತಿಳಿಯುತ್ತದೆ. ಅಲ್ಲಿ ಬಂದವರಲ್ಲಿ ಕೆಲವರ ಗೋಳಾಟ, ದೆವ್ವ ಹಿಡಿದಿದೆ ಎಂದು ಚೀರಾಡುವವರು, ಭಾನಾಮತಿ ಎದ್ದಿದೆ ಎಂದು ಗೋಳಾಡುವವರ ಆಕ್ರಂದನ ಮುಗಿಲು ಮುಟ್ಟುತ್ತದೆ. ಕೇವಲ ಆಧಾರ ಮತ್ತು ತಾಯಿತಗಳಿಂದಲೇ ಗುಣಮಾಡುವ ಇವರ ವ್ಯಕ್ತಿತ್ವ ಆಶ್ಚರ್ಯ

ತರುವಂತಹದು. ಇಲ್ಲಿಯವರೆಗೆ ಯಾರನ್ನು ಇಷ್ಟು ಕಾಣಿಕೆ ಕೊಡಿ, ಇಷ್ಟು ಖರ್ಚು ಎಂದು ಹೇಳಿದವರಲ್ಲ, ಹೇಳುವುದಿಲ್ಲ. ಅಮಾವಾಸ್ಯೆ ದಿನ ಬಂದ ಜನಸಾಗರಕ್ಕೆ ದಾಸೋಹ ಏರ್ಪಡಿಸುತ್ತಾರೆ. ಭಯಂಕರ ದೊಡ್ಡ ಕಡಾಯಿಗಳಲ್ಲಿ ಹುಗ್ಗಿ ಅನ್ನವನ್ನು ಮಾಡುತ್ತಾರೆ, ಪ್ರತಿ ಅಮಾವಾಸ್ಯೆಗೆ ಒಂದು ಸಲವು ಊಟ ಕಡಿಮೆ ಬಿದ್ದ ನಿದರ್ಶನಗಳಿಲ್ಲವಂತೆ, ಇದು ಸಹ ಅಪ್ಪಾವರ ಪವಾಡ ಎಂದು ಇದೇ ಗ್ರಾಮದ ಪ್ರಮುಖರು ಹೃದಯ ತುಂಬಿ ಹೇಳುತ್ತಾರೆ.

ಮೌಢ್ಯವನ್ನು ನಂಬದೇ ಗುರುಗಳು ವೈಚಾರಿಕ ನೆಲೆಯಲ್ಲಿ ವಿಚಾರಿಸುತ್ತಾರೆ. ಬಸವಾದಿ ಶರಣರ ತತ್ವಗಳನ್ನು ಮೈಗೂಡಿಸಿಕೊಂಡು ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಬಡವರಿಗಾಗಿ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಬಡ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯನ್ನು ತೆರೆದಿದ್ದಾರೆ. ಸಮಾಜದ ಒಡನಾಡಿಗಳಾಗಿ ದೀನ, ದಲಿತರ, ಬಡವರ ಬಾಳಿಗೆ ಬೆಳಕಾಗಿದ್ದಾರೆ. "ನಮ್ಮ ಸಿದ್ಧಲಿಂಗ ಅಪ್ಪೋರ ಈ ಭೂಮಿ ಮ್ಯಾಲಾ ನಡೆದಾಡುವ ದೇವರ ಇದ್ದಂಗ ಕಲ್ಯಾಣ ಬಸವಣಪ್ಪ ಹುಟ್ಟಿ ಬಂದ್ಹಂಗ ಆಗ್ಯಾದ ನೋಡ್ರಿ" ಎಂದು ಆ ಗ್ರಾಮದ ಹಿರಿಯರು ಹೇಳುತ್ತಾರೆ, ಅವರ ಮಹಿಮೆ ಅಪಾರವಾದದ್ದು, ಶಬ್ದಕ್ಕೆ ನಿಲುಕುವುದಿಲ್ಲ. ನಿಃಶಬ್ದವಾದ ವ್ಯಕ್ತಿತ್ವ ಹೊಂದಿರುವ **ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು** ಶಿವಸಮಾಜವನ್ನು ಕಟ್ಟಿ ಬೆಳೆಸಲು ನಿರತರಾಗಿದ್ದಾರೆ. ಅವರ ಹೆಸರು ಸೂರ್ಯ ಚಂದ್ರನಿರುವರೆಗೆ ಅಜರಾಮರವಾಗಿ ಉಳಿಯಲಿ.

**ಅಡಿಟಿಪ್ಪಣಿ :**

1. ಚಂದ್ರಶೇಖರ ನಾರಣಾಪುರ : ಕರ್ನಾಟಕದ ವೀರಶೈವ ಮಠಗಳು : ಪುಟ ಸಂಖ್ಯೆ : 233.
2. ಗುಲಬರ್ಗಾ ಜಿಲ್ಲೆ ಗೆಸೆಟಿಯರ್ ಕರ್ನಾಟಕ ರಾಜ್ಯ : 1997.
3. ಬಸವಪ್ಪ ಶಾಸ್ತ್ರಿ ಮಸ್ಕಿ : ಕರಿಬಸವೇಶ್ವರ ವಿಜಯ : 1940.
4. ಶ್ರೀ ಷ॥ ಬ್ರ॥ ಲಿಂ॥ ಸಿದ್ಧಲಿಂಗ ಸ್ವಾಮಿಗಳು : ಕರಿಯ ಬಸವೇಶ್ವರ ನಾಮವಳಿ : 1997.
5. ಸಂದರ್ಶನ : ಗ್ರಾಮದ ಜನರು : 07–08–2006.
6. ಸಂದರ್ಶನ : **ಶ್ರೀ ಮ॥ ಘ॥ ಚ॥ ಅಭಿನವಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು** ಮುಗಳನಾಗಾಂವಿ: ದಿನಾಂಕ ಫೆಬ್ರುವರಿ 2006ರಲ್ಲಿ, 2008, 2010, 2011, ದಿನಾಂಕ: 13–05–2011ರಲ್ಲಿ ಅಪ್ಪಾವರನ್ನು ಸಂದರ್ಶಿಸಲಾಗಿದೆ.